ಅಲ್ಲದೆ, ಬ್ಯಾಂಕಿನ ಅಧಿಕಾರಿಗಳೊಡನೆ ಮಾತನಾಡಿದ್ದೇನೆ. ಆದರ ಮೇಲೆ ಕಮಿಷನ್ ಚಾರ್ಜ್ ಮಾಡುವುದಿಲ್ಲ ರೆಮಿಟೆನ್ಸ್ ತೆಗೆದುಕೊಳ್ಳುತ್ತೇವೆಂದು ಒಪ್ಪಿಕೊಂಡಿರುವುದರಿಂದ ಅಲ್ಲಿ ಹೊಸ ಕ್ಯಾಷ್ ಕೌಂಟರ್ ಓಪನ್ ಮಾಡುವ ಅವಶ್ಯಕತೆ ಇಲ್ಲ.

ಶ್ರೀ ಕೆ. ವಸಂತ ಬಗೇರ.—ತಾತ್ಕಾಲಿಕವಾಗಿ ಈ ಸೌಲಭ್ಯವನ್ನು ನಿಲ್ಲಿಸಲಾಗಿದೆ ಎಂದು ಹೇಳಿದ್ದಾರೆ. ಎಷ್ಟು ಸಮಯದಲ್ಲಿ ಇದನ್ನು ಮತ್ತೆ ಪ್ರಾರಂಭ ಮಾಡುತ್ತೀರಿ ? ಬೇರೆ ಯಾವುದಾದರೂ ಬ್ಯಾಂಕಿನಲ್ಲಿ ಪಾವತಿ ಕೊಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್.—ಆ ಬ್ಯಾಂಕ್‌ನವರೇ ಒಪ್ಪಿಕೊಂಡಿರುವುದರಿಂದ ತೊಂದರೆ ಇಲ್ಲ. ಅವರು ಒಪ್ಪದಿದ್ದರೆ ಬೇರೆ ವ್ಯವಸ್ಥೆ ಮಾಡುತ್ತೇವೆ. ಇಲ್ಲವೇ ನಮ್ಮದಾದರೂ ಕ್ಯಾಷ್ ಕೌಂಟರ್ ಮಾಡುತ್ತೇವೆ.

ಶ್ರೀ ವಸಂತ ಬಂಗೇರ.—ಬ್ಯಾಂಕಿನವರು ಒಪ್ಪಿಕೊಂಡಿದ್ದಾರೆಂದು ಹೇಳುತ್ತಿದ್ದಾರೆ, ಎಷ್ಟು ಸಮಯದೊಳಗೆ ಅದೇ ಬ್ಯಾಂಕಿನಲ್ಲಿ ವ್ಯವಹಾರವನ್ನು ಪ್ರಾರಂಭಿಸಲಿಕ್ಕೆ ಅವಕಾಶ ಮಾಡಿಕೊಡುತ್ತೀರಿ. ಕೆ. ಇ. ಬಿ. ಕೌಂಟರನ್ನು ಬಸ್ ಸ್ಟಾಂಡಿನಲ್ಲಿ ಪ್ರಾರಂಭ ಮಾಡುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್.—ಈಗಾಗಲೇ ಉತ್ತರ ಕೊಟ್ಟಿದ್ದೇನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್.—(ಮಾನ್ಯ ಕಾನೂನು ಸಂಸದೀಯ ವ್ಯವಹಾರ ಆಹಾರ ನಾಗರೀಕ ಸರಬರಾಜು ಮಂತ್ರಿಗಳು).—ಲಿಖಿತ ಮೂಲಕ ನೀಡಲಾದ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಇಟ್ಟಿದ್ದೇನೆ.

ಅಧ್ಯಕ್ಷರು.—ಪಟ್ಟಿಯನ್ನು ಸಭೆಯ ಮುಂದೆ ಇಡಲಾಗಿದೆ.

ಸಂಡೂರು ತಾಲ್ಲೂಕಿನ ಕುರಿ ಕುಪ್ಪ ಫಾರಂನಲ್ಲಿ ಕೆಲಸಮಾಡುತ್ತಿರುವ ದಿನಗೂಲಿ ನೌಕರರನ್ನು ಖಾಯಂ ಗೊಳಿಸುವ ಬಗ್ಗೆ

೬೦ (೨೭೬) ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ರೇಷ್ಮೆ, ಪಶು ಸಂಗೋಪನೆ ಮತ್ತು ಮತ್ಸ್ಯೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಸಂಡೂರು ತಾಲ್ಲೂಕಿನ ಕುರಿಕುಪ್ಪದಲ್ಲಿರುವ ಸಂಯುಕ್ತ ಕುರಿ ಹಾಗೂ ಜಾನುವಾರು ಫಾರಂನಲ್ಲಿ ಸುಮಾರು ಐದು ವರ್ಷಗಳಿಂದ ಕೆಲಸ ಮಾಡುತ್ತಿರುವ ದಿನಗೂಲಿ ನೌಕರರನ್ನು ಖಾಯಂಗೊಳಿಸದಿರುವುದಕ್ಕೆ ಕಾರಣವೇನು ?

ಆ) ಈ ದಿನಗೂಲಿ ನೌಕರರ ಸೇವೆಯನ್ನು ಯಾವಾಗ ಖಾಯಂಗೊಳಿಸಲಾಗುವುದು ?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ರೇಷ್ಮೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು).—

ಅ) ದಿನಾಂಕ ೫-೭-೪೪ರ ಅಧಿಕೃತ ಜ್ಞಾಪನಾ ಪತ್ರದ ಸಂಖ್ಯೆ ಡಿಪಿಎಆರ್ ೧೦ ಎಸ್‌ಎಲ್‌ಸಿ ೮೩ ರಲ್ಲಿ ಉಲ್ಲೇಖಿತ ನಿಯಮಗಳ ಮೇರೆಗೆ ಅರ್ಹರಾಗಿರುವ ಎಲ್ಲಾ ದಿನಗೂಲಿ ನೌಕರರನ್ನು ಮಾಸಿಕ ವೇತನದಲ್ಲಿ ನೇಮಕಮಾಡಿ ಖಾಯಂ ಗೊಳಿಸಲು ಸೂಕ್ತ ಕ್ರಮ ತೆಗೆದು ಕೊಳ್ಳಲಾಗುತ್ತಿದೆ.

ಆ) ಈ ದಿನಗೂಲಿ ನೌಕರರನ್ನು ಸದ್ಯದಲ್ಲಿಯೇ ಖಾಯಂಗೊಳಿಸಲಾಗುವುದು.

ಮೀನುಗಾರಿಕೆ ಸೂಪರಿಂಟೆಂಡೆಂಟ್‌ರ ಹುದ್ದೆಗೆ ಅಭ್ಯರ್ಥಿಯನ್ನು ನೇಮಕ ಮಾಡುವ ಬಗ್ಗೆ

೬೧ (೧೨೦) ಶ್ರೀ ಬಿ. ರಾಜುಗೌಡ (ಹನೂರು).—ಮಾನ್ಯ ರೇಷ್ಮೆ, ಪಶುಸಂಗೋಪನೆ ಮತ್ತು ಮತ್ಸ್ಯೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಮೀನುಗಾರಿಕೆ ಸೂಪರಿಂಟೆಂಡೆಂಟ್‌ರ ಹುದ್ದೆಗೆ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಯಾವಾಗ ಕರೆಯಲಾಯಿತು?